# ಖನಾ ಮತ್ತು ಲೀಲಾವತಿ

‘‘ಭಾರತೀಯ ಸ್ತ್ರೀ, ಭಾರತೀಯ ವಸ್ತ್ರದಲ್ಲಿ ಭಾರತದ ಅಮರ ಋಷಿವಾಣಿಯನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮೊಳಗುವಂತಾದರೆ, ಪಾಶ್ಚಾತ್ಯ, ಜಗತ್ತಿನಲ್ಲಿ ಒಂದು ಹೊಸ ಅಲೆಯೇ ಮೇಲೇಳಲಿದೆ. ಮೈತ್ರೇಯಿ, ಖನಾ, ಲೀಲಾವತಿ, ಸಾವಿತ್ರಿ ಮತ್ತು ಉಭಯ ಭಾರತಿಯರು ಜನಿಸಿದ ಈ ನಾಡಿನಲ್ಲಿ ಇದನ್ನು ಮಾಡಬಲ್ಲ ಸ್ತ್ರೀ ಸಿಗಲಾರಳೇನು?’’

— ಎಂದು ಸ್ವಾಮಿ ವಿವೇಕಾನಂದರು ೧೮೯೭ ಏಪ್ರಿಲ್‌ನಲ್ಲಿ ಶ್ರೀಮತಿ ಸರಳಾ ಘೋಷಾಲ್‌ಗೆ ಬರೆದ ಪತ್ರದಲ್ಲಿ ಉದ್ಗರಿಸುತ್ತಾರೆ. ಹಾಗಾದರೆ ಯಾರು ಈ ಖನಾ ಮತ್ತು ಲೀಲಾವತಿ?

ಖನಾ ಮತ್ತು ಲೀಲಾವತಿ ಪ್ರಾಚೀನ ಭಾರತದ ಜ್ಯೋತಿಷ್ಯ ಶಾಸ್ತ್ರ ಹಾಗೂ ಗಣಿತಶಾಸ್ತ್ರದ ಕ್ಷೇತ್ರದಲ್ಲಿ ಕಾಣುವಂತಹ ಎರಡು ದೊಡ್ಡ ಹೆಸರುಗಳು.

ಲಂಕಾದಲ್ಲಿದ್ದ ಓರ್ವ ಜ್ಯೋತಿಷಿಯ ಮಗಳು ಖನಾ. ಏಳು ಅಥವಾ ಎಂಟನೆಯ ಶತಮಾನದಲ್ಲಿ ಉಜ್ಜಯಿನಿಯನ್ನು ಆಳುತ್ತಿದ್ದ ರಾಜಾ ವಿಕ್ರಮಾದಿತ್ಯ. ಅವನ ಆಸ್ಥಾನದಲ್ಲಿ ಮಹಾನ್ ಕಲಾವಿದರು, ಕವಿಗಳು, ವಿದ್ವಾಂಸರು, ಜ್ಯೋತಿಷಿಗಳು ಮತ್ತಿತರರು ಇದ್ದರು. ಜ್ಯೋತಿಷಿಗಳಲ್ಲಿ ಪ್ರಸಿದ್ಧನಾದವನು ವರಾಹ. ರಾಜನ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಅವನೂ ಒಬ್ಬನಾಗಿದ್ದನು.

ಮಿಹಿರನು ವರಾಹನ ಪುತ್ರನಾಗಿದ್ದನು. ಮಿಹಿರನು ಹುಟ್ಟುತ್ತಲೇ ಅವನ ತಂದೆ ವರಾಹನು, ಮಗನ ಜಾತಕವನ್ನು ನೋಡಿ, ಅವನು ಕೇವಲ ಹತ್ತು ವರ್ಷ ಬದುಕುತ್ತಾನೆ ಎಂದು ಲೆಕ್ಕ ಹಾಕಿದನು. ಆದರೆ ಅವನ ಲೆಕ್ಕದಲ್ಲಿ ಸ್ವಲ್ಪ ಹಿಂದುಮುಂದಾಗಿತ್ತು. ಅವನು ಹತ್ತರ ಮುಂದೆ ಒಂದು ಸೊನ್ನೆಯನ್ನು ಹಾಕಲು ಮರೆತಿದ್ದನು. ಅಲ್ಪಾಯುವಾದ ಮಗನನ್ನು ಪ್ರೀತಿಸಿ ಮುಂದೆ ದುಃಖಕ್ಕೀಡಾಗುವುದು ಬೇಡವೆಂದರಿತು, ವರಾಹನು ಮಗುವನ್ನು ಮಣ್ಣಿನ ಮಡಕೆಯಲ್ಲಿ ಹಾಕಿ ಕ್ಷಿಪ್ರಾ ನದಿಯಲ್ಲಿ ಬಿಟ್ಟನು.

ಮಡಕೆ ತೇಲಿಕೊಂಡು ಹೋಗಿ ಕೆಲವು ವರ್ತಕರ ಕೈ ಸೇರಿತು. ಅವರು ಆ ಮಗುವಿನ ಪಾಲನೆ-ಪೋಷಣೆ ಮಾಡಿದರು. ಅವನಿಗೆ ಕೆಲಸ ಕೊಟ್ಟರು. ಬಾಲಕ ಅತ್ಯಂತ ಸಮರ್ಥನಾಗಿದ್ದನು. ಅವನಿಗೆ ವಂಶಪಾರಂಪರ್ಯವಾಗಿ ಬಂದ ಜ್ಯೋತಿಷ್ಯಶಾಸ್ತ್ರದ ಪ್ರಜ್ಞೆ ಬಹಳ ಇತ್ತು. ಅವನು ಊರಿಂದೂರಿಗೆ ಸಂಚರಿಸುತ್ತ ಲಂಕೆಯಲ್ಲಿ ಒಬ್ಬ ಜ್ಯೋತಿಷಿಯ ಮನೆಯನ್ನು ಸೇರಿದನು. ಅವನ ಶಿಷ್ಯನಾಗಿದ್ದು ಜ್ಯೋತಿಷ್ಯವನ್ನು ಕಲಿತನು. ಜ್ಯೋತಿಷ್ಯದಲ್ಲಿ ಅತ್ಯಂತ ಪ್ರತಿಭಾನ್ವಿತೆಯಾದ ಅವನ ಮಗಳನ್ನು ಮಿಹಿರನು ಮದುವೆಯಾದನು. ಅವಳ ಹೆಸರು ಖನಾ.

ಕಾಲ ಕಳೆದಂತೆ ಅವನು ಭಾರತಕ್ಕೆ ಬರುವಂತಾಯಿತು. ಕ್ರಮೇಣ ಅವನು ಉಜ್ಜಯಿನಿಗೂ ಬಂದನು. ಅಲ್ಲಿ ವಿಕ್ರಮಾ




ದಿತ್ಯನ ಆಸ್ಥಾನದಲ್ಲಿ ವರಾಹನನ್ನು ಸೋಲಿಸಿಯೂಬಿಟ್ಟನು. ಈ ನಡುವೆ ಅದು ಹೇಗೋ ವರಾಹನಿಗೆ ಮಿಹಿರನು ತನ್ನ ಮಗನೇ ಎಂದು ಗೊತ್ತಾಯಿತು. ತಂದೆ ಮಗ-ಸೊಸೆಯರೊಡನೆ ಅನುನಯ-ವಿನಯದಿಂದ ಮಾತನಾಡಿ ಅವರನ್ನು ತನ್ನ ಮನೆಯಲ್ಲೇ ಇರಿಸಿಕೊಂಡನು.

ಈಗ ಕಷ್ಟಕಷ್ಟತರವಾದ ಜ್ಯೋತಿಷ್ಯದ ಸಮಸ್ಯೆಗಳನ್ನು ಮಗ ಸೊಸೆಯರು ಪರಿಹರಿಸತೊಡಗಿದರು. ಕೆಲವೊಮ್ಮೆ ಖನಾ ಮನೆಯಲ್ಲಿರುವಾಗ ಮಾವ ಮಾಡಿದ ಎಲ್ಲಕ್ಕಿಂತ ದೊಡ್ಡ ತಪ್ಪನ್ನು ಮಾವನಿಗೇ ನೆನಪಿಸಿಕೊಡುತ್ತಿದ್ದಳು. ಸುತ್ತಮುತ್ತಲ ಜನರಿಗೆ ಮಿಹಿರನ ಪತ್ನಿ ಎಂತಹ ಬುದ್ಧಿವಂತೆಯೆಂದು ಗೊತ್ತಿರಲಿಲ್ಲ. ಮಾವ ವರಾಹನಿಗೆ ಅವಳ ಪ್ರತಿಭೆಯನ್ನು ಕಂಡು ಈರ್ಷೆಯಾಯಿತು. ಜ್ಯೋತಿಶ್ಶಾಸ್ತ್ರದಲ್ಲಿ ಅವಳ ಪ್ರತಿಭೆಯೆದುರು ಅವಳ ಪತಿಯಾಗಲಿ, ಮಾವನಾಗಲಿ ಸರಿಸಮರಾಗಿರಲಿಲ್ಲ.

ಒಂದು ದಿನ ರಾಜನು ವರಾಹನಿಗೆ ನಕ್ಷತ್ರಗಳಿಗೆ ಸಂಬಂಧಿಸಿದಂತೆ ಒಂದು ಕಠಿಣ ಪ್ರಶ್ನೆಯನ್ನು ಕೇಳಿದನು. ವರಾಹನು ತಾನು ಉತ್ತರಿಸಲು ಕಾಲಾವಕಾಶವನ್ನು ಕೇಳಿದನು. ಸಾಯಂಕಾಲ ಅವನು ಮನೆಗೆ ಬಂದು ಆ ಪ್ರಶ್ನೆಗೆ ಉತ್ತರವನ್ನು ಹುಡುಕಿದ್ದೇ ಹುಡುಕಿದ್ದು. ಆದರೆ ಏನೂ ಪ್ರಯೋಜನವಾಗಲಿಲ್ಲ. ಊಟದ ವೇಳೆಯಲ್ಲಿ ಖನಾ ಆ ಪ್ರಶ್ನೆಗೆ ಬಹಳ ಸುಲಭವಾಗಿ ಉತ್ತರ ಕೊಟ್ಟಳು. ರಾಜ ಆಸ್ಥಾನದಲ್ಲಿ ತನ್ನ ಘನ ಮರ್ಯಾದೆಯನ್ನು ಸೊಸೆ ಕಾಪಾಡಿದಳೆಂದು ವರಾಹನಿಗೆ ಬಹಳ ಸಂತೋಷವಾಯಿತು.

ಮರುದಿನ ರಾಜಸಭೆಯಲ್ಲಿ ವರಾಹನು ರಾಜನಿಗೆ ಉತ್ತರವನ್ನು ಒಪ್ಪಿಸಿದನು. ರಾಜ, ‘‘ನೀನು ಆ ಉತ್ತರವನ್ನು ಹೇಗೆ ಪಡೆದೆ?’’ ಎಂದು ಕೇಳಿದನು. ವರಾಹನು ಆ ಉತ್ತರವನ್ನು



ನೀಡಿದವಳು ತನ್ನ ಸೊಸೆ ಖನಾ ಎಂದು ಹೇಳಲೇಬೇಕಾಯಿತು. ರಾಜ ಮತ್ತು ಆಸ್ಥಾನದ ಪಂಡಿತರೆಲ್ಲ ಬೆರಗಾದರು. ರಾಜ, ''ಖನಾಳನ್ನು ರಾಜಗೌರವದೊಂದಿಗೆ ಆಸ್ಥಾನಕ್ಕೆ ಕರೆತನ್ನಿರಿ. ನಾನು ಇನ್ನೂ ಕೆಲವು ಗಹನ ಪ್ರಶ್ನೆಗಳನ್ನು ಕೇಳಬೇಕು'' ಎಂದನು. ವರಾಹನಿಗೆ ಅದು ಇಷ್ಟವಾಗಲಿಲ್ಲ.

ಮನೆಗೆ ಮರಳಿದ ವರಾಹನು ತನ್ನ ಮಗ ಮಿಹಿರನಿಗೆ ಒಂದು ಭಯಂಕರ ಆದೇಶವನ್ನು ಕೊಟ್ಟನು. ಅವನು ಮಿಹಿರನಿಗೆ ಖನಾಳ ನಾಲಗೆಯನ್ನು ಕತ್ತರಿಸುವಂತೆ ಆದೇಶಿಸಿದನು. ಮಿಹಿರನು ಸಂದಿಗ್ಧದಲ್ಲಿ ಸಿಲುಕಿದನು. ತಂದೆಯ ಆದೇಶವನ್ನು ಪಾಲಿಸುವುದೇ ಅಥವಾ ಪ್ರಾಮಾಣಿಕಳಾದ, ಪ್ರೀತಿಪಾತ್ರಳಾದ ಪತಿವ್ರತಾ ಪತ್ನಿಯ, ವಿದ್ವಾನ್ ಪತ್ನಿಯ ಪ್ರೇಮಕ್ಕೆ ಬೆಲೆ ಕೊಡುವುದೆ? ಈ ಸಂದಿಗ್ಧದಲ್ಲಿ ಖನಾ ತನ್ನ ಪತಿಗೆ ನೆರವಾದಳು.

ಖನಾ ತನ್ನ ಪತಿಗೆ, ಪತ್ನಿಯ ಮೇಲಿನ ಪ್ರೇಮಕ್ಕಿಂತ ತಂದೆಯ ಮಾತನ್ನು ಪರಿಪಾಲಿಸುವುದೇ ಶ್ರೇಷ್ಠವೆಂದು ಸೂಚಿಸಿದಳು. ಅಲ್ಲದೆ, ತಾನೊಂದು ಅವಘಡದಲ್ಲಿ ತೀರಿಕೊಳ್ಳಲಿದ್ದೇನೆ, ಆದ್ದರಿಂದ ಯಾವ ಚಿಂತೆಯೂ ಇಲ್ಲದೆ ತನ್ನ ನಾಲಗೆಯನ್ನು ಕತ್ತರಿಸುವಂತೆ ಅವಳು ಕೇಳಿಕೊಂಡಳು. ಮಿಹಿರನು ಅತೀವ ದುಃಖದಿಂದ ತನ್ನ ಪತಿವ್ರತಾ ಪತ್ನಿಯ ವಿನಂತಿಯನ್ನು ನಡೆಸಬೇಕಾಯಿತು.

ಈ ದಿಟ್ಟ ಸ್ತ್ರೀ ಖನಾ ತನ್ನ ಪತಿಗೆ ದಿಟ್ಟವಾದ ಕರ್ತವ್ಯಪಾಲನೆಯ ವಿಧಾನವನ್ನು ತೋರಿಸಿಕೊಟ್ಟಳು. ಕುಲಮರ್ಯಾದೆಯನ್ನು ಮೀರಿ ತಾನು ರಾಜನ ಆಸ್ಥಾನಕ್ಕೆ ಹೋಗಬಾರದು ಎಂಬ ಮಾವನ ಬಯಕೆಯನ್ನು ಈಡೇರಿಸಿದಳು.

ಉತ್ತರ ಭಾರತದಲ್ಲಿ ಇಂದಿಗೂ ಜನ ಹಾಗೂ ರೈತರು ಖನಾ ಕಲಿಸಿಕೊಟ್ಟ ಜ್ಯೋತಿಷ್ಯಶಾಸ್ತ್ರದ ಸೂತ್ರಗಳನ್ನು ಅನುಸರಿಸಿ, ಬಹಳ ಸರಿಯಾಗಿ ಹಾಗೂ ಮಳೆಯ ಊಹಾಪೋಹಗಳನ್ನು ಮಾಡುತ್ತಾರೆ.

## ಲೀಲಾವತಿ

ಲೀಲಾವತಿ ಯಾರು? ಖ್ಯಾತ ಗಣಿತಜ್ಞೆ. ಪ್ರಾಚೀನ ಕಾಲದ ಭಾರತದ ಎಲ್ಲ ಗುರು-ಶಿಷ್ಯರೂ ಧೀಮಂತೆ ಲೀಲಾವತಿಯ ಹೆಸರನ್ನು ಹೇಳಿಯೇ ಹೇಳಿದ್ದಾರೆ. ವಿದೇಶಿಯರಿಗೆ ಗಣಿತದ ಗಂಧಗಾಳಿ ಇಲ್ಲದ ದಿನಗಳಲ್ಲಿ ಅವಳು ಆಧುನಿಕ ಗಣಿತಜ್ಞರೂ ಬೆರಗಾಗುವಂತೆ ಗಣಿತದ ಅದ್ಭುತ ಸೂತ್ರಗಳನ್ನು ನೀಡಿದ್ದಾಳೆ.

೧೧ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಗಣಿತ ಹಾಗೂ ಜ್ಯೋತಿಷ್ಯಶಾಸ್ತ್ರದಲ್ಲಿ ಬಹಳ ದೊಡ್ಡ ಹೆಸರು ಭಾಸ್ಕರಾಚಾರ್ಯರದು. ಅವರ ಮಗಳ ಹೆಸರು ಲೀಲಾವತಿ. ಅವರಿಗೆ ಅವಳೊಬ್ಬಳೇ ಸಂತಾನ. ಅವಳು ವಿವಾಹವಾಗಿ ಅಲ್ಪಕಾಲಕ್ಕೆ ವಿಧವೆಯಾಗುತ್ತಾಳೆ ಎಂದು ಅವನಿಗೆ ತನ್ನ ಜ್ಯೋತಿಷ್ಯಜ್ಞಾನದಿಂದ ಗೊತ್ತಾಯಿತು. ಅವನು ಬಹಳವಾಗಿ ಆಲೋಚಿಸಿ, ಈ ಮುಹೂರ್ತದಲ್ಲಿ ಮದುವೆಯಾದರೆ ಅವಳು ವಿಧವೆಯಾಗುವುದಿಲ್ಲ ಎಂದು ವಿವಾಹಕ್ಕೆ ಒಂದು ಮುಹೂರ್ತ ವನ್ನು ನಿಶ್ಚಯಿಸಿದನು.

ಮದುವೆಯ ದಿನಾಂಕ ಬಂದಿತು. ಅಂದಿನ ದಿನಗಳಲ್ಲಿ ನೀರಿನ ಗಡಿಯಾರವನ್ನು ಬಳಸುತ್ತಿದ್ದರು. ನೀರು ತುಂಬಿದ ಒಂದು ದೊಡ್ಡ ಪಾತ್ರೆಯೊಳಗೆ ಅಡಿಯಲ್ಲಿ ತೂತು ಇರುವ ಒಂದು ಲೋಟವನ್ನು ಇಡಲಾಗುತ್ತಿತ್ತು. ತೂತಿನ ಮೂಲಕ ಲೋಟದಲ್ಲಿ ನೀರು ತುಂಬಿ, ಲೋಟ ನೀರಿನಲ್ಲಿ ಮುಳುಗಿದಾಗ ಒಂದು ಘಟಿ (೨೪ ನಿಮಿಷಗಳು) ಎಂದು ಗೊತ್ತಾಗುತ್ತಿತ್ತು. ಆದರೆ ಭಗವದಿಚ್ಛೆಗೆ ವಿರುದ್ಧವಾಗಿ ನಡೆಯಲು ಸಾಧ್ಯವೇ ಇಲ್ಲ.

ಮದುವೆಯ ದಿನದಂದು ಲೀಲಾವತಿ ಸಿಂಗರಿಸಿಕೊಂಡು ಕುಳಿತಿದ್ದಳು. ಪ್ರತಿಯೊಬ್ಬರೂ ವಿವಾಹದ ಮುಹೂರ್ತಕ್ಕಾಗಿ ಕಾಯುತ್ತಿದ್ದರು. ಆಗ ಲೀಲಾವತಿಯ ಆಭರಣದಿಂದ ಒಂದು ಮುತ್ತು ತುಂಡಾಗಿ ಗಡಿಯಾರದ ಲೋಟದಲ್ಲಿ ಬಿದ್ದಿತು.

ಅದು ಲೋಟದಡಿಗೆ ಹೋಗಿ ಲೋಟದ ತೂತು ಮುಚ್ಚಿದಂತಾಯಿತು. ಪಾತ್ರೆಯಿಂದ ನೀರು ಲೋಟಕ್ಕೆ ಬರಲಿಲ್ಲ. ಮುಹೂರ್ತ ತಪ್ಪಿಹೋಯಿತು. ಇದು ಯಾರಿಗೂ ಗೊತ್ತಾಗಲಿಲ್ಲ. ವಿವಾಹವಂತೂ ನಿಶ್ಚಿತ ಮುಹೂರ್ತದಲ್ಲಿ ನಡೆಯಲಿಲ್ಲ. ಲೀಲಾವತಿ ವಿಧವೆಯಾದಳು. ತಂದೆ-ಮಗಳಿಬ್ಬರಿಗೂ ಬಹಳ ನಿರಾಶೆಯಾಯಿತು.

ಅವಳನ್ನು ವೈಧವ್ಯದ ದುಃಖದಿಂದ ಹೊರತರಲು ಭಾಸ್ಕರಾಚಾರ್ಯರು ಅವಳಿಗೆ ಗಣಿತವನ್ನು ಕಲಿಸತೊಡಗಿದರು. ಶೀಘ್ರದಲ್ಲಿ ಅವಳು ಮಹಾನ್ ಗಣಿತಜ್ಞೆಯಾದಳು. ಗಣಿತಶಾಸ್ತ್ರದ ಹೊಸ ಹೊಸ ಪ್ರಯೋಗಗಳನ್ನು ಮಾಡುವಲ್ಲಿ ಅವಳು ತನ್ನ ಜೀವನದ ಸಾರ್ಥಕ್ಯವನ್ನು ಕಂಡುಕೊಂಡಳು.

ಭಾಸ್ಕರಾಚಾರ್ಯರು ಬೀಜಗಣಿತ, ರೇಖಾಗಣಿತ ಮತ್ತು ಜ್ಯೋತಿಷ್ಯವನ್ನು ಕುರಿತು **ಸಿದ್ಧಾಂತ ಶಿಖಾಮಣಿ** ಎಂಬ ಖ್ಯಾತ ಗ್ರಂಥವನ್ನು ರಚಿಸಿರುವರು. ಆ ಗ್ರಂಥದಲ್ಲಿ ಗಣಿತದ ಅಧಿಕಾಂಶಕ್ಕೆ ಲೇಖನಿಯ ರೂಪವನ್ನು ನೀಡಿದವಳು ಲೀಲಾವತಿ. ತನ್ನ ಪುತ್ರಿಯ ಈ ಮಹಾನ್ ಯೋಗದಾನವನ್ನು ಅಮರಗೊಳಿಸಲು ಭಾಸ್ಕರಾಚಾರ್ಯರು ತಮ್ಮ ಗ್ರಂಥದ ಬೀಜಗಣಿತ ವಿಭಾಗಕ್ಕೆ '**ಲೀಲಾವತಿ**' ಎಂದೇ ಹೆಸರಿಟ್ಟಿದ್ದಾರೆ.

ಗಣಿತದ ಹೊಸ ಹೊಸ ಸಿದ್ಧಾಂತಗಳನ್ನು ಸಂಶೋಧಿಸಿ ಲೀಲಾವತಿ ಮಾನವತೆಗೆ ಮಹದುಪಕಾರವನ್ನು ಮಾಡಿದ್ದಾಳೆ. ❁

*('ಕಲ್ಯಾಣ ಕಲ್ಪತರು' ಪತ್ರಿಕೆಯಿಂದ*
*ಸಂಗ್ರಹ: ಮಾತಾ ತ್ಯಾಗಮಯೀ)*